ಅಯ್ಯೋ ಪಾಪ ಅನ್ನುವ ಮರುಕ ಹುಟ್ಟಿಸುವ ಹಾಗೆ ಇರುತ್ತಿದ್ದವು. ರಸ್ತೆಬದಿಯಲ್ಲಿ, ಮಸೀದಿಯ ಅಂಗಳದಲ್ಲಿ, ಬಿದ್ದ ಮನೆಗಳ ಮೋಟು ಗೋಡೆಗಳ ಮೇಲೆ ತಮ್ಮ ಪುಸ್ತಕ ಮಾರುವವರನ್ನು ಕಂಡಾಗ ಕೂಡ ಮರುಕ ಹುಟ್ಟುತ್ತಿತ್ತು.

ಸಾಹಿತ್ಯದಲ್ಲೂ ಬದುಕಿನಲ್ಲೂ ಈ ಜಗತ್ತಿನಲ್ಲೂ ನನ್ನ ಸ್ಥಾನ ಕೇಂದ್ರಸ್ಥವಾದುದಲ್ಲ. ಜಗತ್ತಿನ ಕೇಂದ್ರದಲ್ಲಿ ಶ್ರೀಮಂತವಾದ ಬದುಕಿದೆ, ನಮ್ಮ ಬದುಕಿಗಿಂತ ಹೆಚ್ಚು ಕುತೂಹಲ ಕೆರಳಿಸುವ ಹಾಗಿದೆ, ಇಸ್ತಾಂಬುಲ್‌ನಲ್ಲಿರುತ್ತ, ಟರ್ಕಿಯಲ್ಲಿರುತ್ತ ಅಂಥ ಬದುಕಿಗೆ ಹೊರತಾದವನಾಗಿದ್ದೇನೆ ನಾನು ಅನ್ನಿಸುತ್ತಿತ್ತು. ಇವತ್ತು ಜಗತ್ತಿನ ಅನೇಕರ ಜೊತೆಗೆ ಈ ಭಾವನೆ ಹಂಚಿಕೊಳ್ಳುತ್ತಿದ್ದೇನೆ ಅನ್ನಿಸುತ್ತಿದೆ. ಇದೇ ರೀತಿಯಲ್ಲಿ ಸಾಹಿತ್ಯದ ಲೋಕಕ್ಕೂ ಒಂದು ಕೇಂದ್ರವಿದೆ, ಅದು ನನ್ನಿಂದ ಬಹಳ ದೂರದಲ್ಲಿದೆ ಅನ್ನಿಸುತ್ತಿತ್ತು. ನನ್ನ ಮನಸ್ಸಿನಲ್ಲಿ ಇದ್ದದ್ದು ಪಾಶ್ಚಾತ್ಯ ಜಗತ್ತಲ್ಲ, ಪಾಶ್ಚಾತ್ಯ ಸಾಹಿತ್ಯ. ನಾವು ಟರ್ಕರು ಅದರ ಹೊರಗೇ ಇದ್ದೆವು. ಈ ಮಾತಿಗೆ ನಮ್ಮಪ್ಪನ ಲೈಬ್ರರಿಯೇ ಸಾಕ್ಷಿ. ಒಂದು ತುದಿಯಲ್ಲಿ ಇಸ್ತಾಂಬುಲ್ ಪುಸ್ತಕಗಳು, ನಮ್ಮ ಸ್ಥಳೀಯ ಜಗತ್ತು, ನಮಗೆಲ್ಲ ಪ್ರಿಯವಾದ ಅದರ ವಿವರಗಳು ಇದ್ದವು. ಇನ್ನೊಂದು ತುದಿಯಲ್ಲಿ ಪಶ್ಚಿಮದ ಜಗತ್ತು ಇತ್ತು. ಆ ಜಗತ್ತಿಗೂ ನಮ್ಮ ಜಗತ್ತಿಗೂ ಹೋಲಿಕೆಯೇ ಇರಲಿಲ್ಲ. ಇದು ನಮಗೆ ನೋವು ತರುತ್ತಿತ್ತು, ಭರವಸೆಯನ್ನೂ ಹುಟ್ಟಿಸುತ್ತಿತ್ತು. ಬರೆಯುವುದೆಂದರೆ, ಓದುವುದೆಂದರೆ ಇನ್ನೊಂದು ಜಗತ್ತಿನ ಅನ್ಯತೆ, ಅಪರಿಚಿತತೆ, ಬೆರಗುಗಳಲ್ಲಿ ಸಮಾಧಾನವನ್ನು ಕಾಣುವುದಕ್ಕೆ ನಾವಿದ್ದ ಜಗತ್ತನ್ನು ಬಿಡುವ ಕೆಲಸವಾಗಿರುತ್ತಿತ್ತು. ನಮ್ಮಪ್ಪ ತಮ್ಮ ಬದುಕನ್ನು ಬಿಟ್ಟು ಪಶ್ಚಿಮಕ್ಕೆ ಪಲಾಯನ ಮಾಡಲು ಕಾದಂಬರಿ ಓದುತ್ತಿದ್ದರು ಅನ್ನಿಸುತ್ತದೆ. ಆನಂತರದಲ್ಲಿ ನಾನೂ ಅದೇ ಕೆಲಸ ಮಾಡುವವನಿದ್ದೆ. ನಮ್ಮ ಸಂಸ್ಕೃತಿಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ನಾವು ಆ ದಿನಗಳಲ್ಲಿ ಪುಸ್ತಕಗಳನ್ನು ಎತ್ತಿಕೊಳ್ಳುತ್ತಿದ್ದೆವು ಅನ್ನಿಸುತ್ತದೆ. ನಮ್ಮ ಸಂಸ್ಕೃತಿಯಲ್ಲಿ ನಮಗೆ ಕೊರತೆಗಳೇ ಕಾಣುತ್ತಿದ್ದವು. ಕೇವಲ ಓದುವುದಷ್ಟರಿಂದಲೇ ನಾವು ಇಸ್ತಾಂಬುಲ್ ಬಿಟ್ಟು ಪಶ್ಚಿಮಕ್ಕೆ ಪ್ರವಾಸ ಹೋಗುತ್ತಿದ್ದೆವು ಎಂದಲ್ಲ, ಬರವಣಿಗೆಯೂ ಅದೇ ಕಾರಣಕ್ಕೆ ಒದಗುತ್ತಿತ್ತು. ಆ ನೋಟ್‌ಬುಕ್ಕುಗಳನ್ನು ತುಂಬಿಸುವ ಸಲುವಾಗಿ ನಮ್ಮಪ್ಪ ಪ್ಯಾರಿಸ್‌ಗೆ ಹೋಗಿ, ರೂಮಿನಲ್ಲಿ ಒಂಟಿಯಾಗಿ ಕೂತು ಬರೆದಿದ್ದರು, ಆಮೇಲೆ ಅದನ್ನೆಲ್ಲ ಟರ್ಕಿಗೆ ವಾಪಸ್ಸು ತಂದಿದ್ದರು. ನಮ್ಮಪ್ಪನ ಸೂಟ್‌ಕೇಸು ದಿಟ್ಟಿಸುತ್ತಿರುವಾಗ ಈ ಕಾರಣಕ್ಕೇ ನನ್ನ ಮನಸ್ಸು ಅಸ್ವಸ್ಥವಾಗಿದೆ ಅನ್ನಿಸುತಿತ್ತು. ಟರ್ಕಿಯಲ್ಲಿ ಲೇಖಕನಾಗಿ ಬದುಕಲು ಇಪ್ಪತ್ತೈದು ವರ್ಷಕಾಲ ಕೋಣೆಯಲ್ಲಿ ಕೂತು ಕೆಲಸ ಮಾಡಿ ಆದಮೇಲೆ ನಮ್ಮಪ್ಪ ತನ್ನ ಆಲೋಚನೆಗಳನ್ನೆಲ್ಲ ಸೂಟ್‌ಕೇಸಿನಲ್ಲಿ ಬಚ್ಚಿಟ್ಟಿದ್ದಕ್ಕಾಗಿ, ಬರವಣಿಗೆ ಅನ್ನುವುದು ಸಮಾಜ, ಪ್ರಭುತ್ವ ಮತ್ತು ಜನದ ಕಣ್ಣಿನಿಂದ ದೂರವಾಗಿ ಗುಟ್ಟಾಗಿ ಮಾಡುವ ಕೆಲಸ ಎಂದು ಭಾವಿಸಿದ್ದಕ್ಕಾಗಿ ನನ್ನ ಮನಸ್ಸು ಕಹಿಯಾಗುತ್ತದೆ. ಈ ಕಾರಣಕ್ಕಾಗೇ ಇರಬೇಕು ನಮ್ಮಪ್ಪ ಸಾಹಿತ್ಯವನ್ನು ನನ್ನ ಹಾಗೆ ಗಂಭೀರವಾಗಿ ಪರಿಗಣಿಸಲಿಲ್ಲವೆಂದು ಅವರ ಬಗ್ಗೆ ಕೋಪಗೊಂಡಿದ್ದೆ.

ನಮ್ಮಪ್ಪ ನನ್ನ ಥರ ಬದುಕಲಿಲ್ಲ, ಬದುಕಿನ ಜೊತೆ ನನ್ನ ಹಾಗೆ ಎಂದೂ ಜಗಳವಾಡಲಿಲ್ಲ, ಗೆಳೆಯರು ಮತ್ತೆ ಮನೆಯವರ ಜೊತೆ ನಕ್ಕುಕೊಂಡು ಸುಖವಾಗಿದ್ದುಬಿಟ್ಟರು ಅನ್ನುವ ಕಾರಣಕ್ಕೇ ನನಗೆ ಅವರ ಮೇಲೆ ಕೋಪವಿತ್ತು. ಆದರೆ ನನಗೆ ಅವರ ಮೇಲೆ ಇರುವುದು ಕೋಪಕ್ಕಿಂತ ಹೆಚ್ಚಾಗಿ ಅಸೂಯೆ ಎಂದು ನನ್ನೊಳಗೇ ಅನ್ನಿಸುತ್ತಲೂ ಇತ್ತು. ಅಸೂಯೆ ಅನ್ನುವುದೇ ಸರಿ ಅನ್ನಿಸಿ ಇನ್ನಷ್ಟು ಕಸಿವಿಸಿಯಾಗುತ್ತಿತ್ತು.

ಆಗ ತಿರಸ್ಕಾರದ, ಕೋಪದ ದನಿಯಲ್ಲಿ ಕೇಳಿಕೊಳ್ಳುತ್ತಿದ್ದೆ — ಸಂತೋಷವೆಂದರೇನು? ಒಂಟಿ